**ಅಜ್ಜಿ ಮೌನವಾದರು; ದಾರಿಯೂ ಮತ್ತು ಮಾತುಗಳೂ ಮುಗಿದಿದ್ದವು. ಇಡೀ ನಾಡಿನ ತುಂಬೆಲ್ಲಾ ಹಿಜಾಬ್ ಗದ್ದಲ ತುಂಬಿ ತುಳುಕುತ್ತಿತ್ತು. ಮುಸಲ್ಮಾನ ಹುಡುಗಿಯರು ಶಾಲಾ ಕಾಲೇಜಿಗೆ ಹೋಗುವುದೋ ಬಿಡುವುದೋ ಅನ್ನುವ ಜಿಜ್ಞಾಸೆಯಲ್ಲಿ ಒದ್ದಾಡುತ್ತಿದ್ದರು.**



ಮಂದ ಬೆಳಕಿನಲ್ಲಿ ಇಡೀ ರೂಮನ್ನು ಕಣ್ಣಾಡಿಸುತ್ತಾ ತಿರುಗುವ ಫ್ಯಾನನ್ನೇ ನೋಡುತ್ತಿದ್ದಳು.

ನಿನ್ನೆ ಮೊನ್ನೆಯಿಂದ ಮನೆಯಲ್ಲಿ ನಡೆಯುತ್ತಿರುವ ಅಪ್ಪನ ಮಾತುಗಳು, ಅಮ್ಮನ ಹಿತನುಡಿಗಳೇ ತಲೆಯಲ್ಲಿ ಗಿರಗಿರ ತಿರುಗುತ್ತಿದ್ದವು.

'ನಿನ್ನಿಷ್ಟ ಕಣಮ್ಮ ನಾವು ನಿನಗೆ ಹೇಳುವಷ್ಟು ವಿಚಾರ ನಮಗೆ ತಿಳಿದಿಲ್ಲ. ನಿನ್ನ ಭವಿಷ್ಯ ಚೆಂದ ಇರಲಿ ಅಂತ ನಮ್ಮ ಒದ್ದಾಟ. ಇರೋ ಒಬ್ಬ ಮಗಳು ಕೊನೆಯವರೆಗೂ ಒಂದು ತೊಟ್ಟು ಕಣ್ಣೀರು ಹಾಕದಂತೆ ಬಾಳಿ ಬದುಕಲಿ ಅನ್ನುವ ಹಂಬಲ ನಮ್ಮದು. ಬಾಲ್ಯದಿಂದಲೂ ನಿನಗೆ ಬೇಡವಾದದ್ದು ನಾವು ಎಂದಿಗೂ ಮಾಡಿಲ್ಲ. ಈ ವಿಚಾರದಲ್ಲೂ ನಾವು ನಮ್ಮ ಬಲ ನಿನ್ನ ಮೇಲೆ ಹೇರುವುದಿಲ್ಲ. ನೀ ಹ್ಞೂಂ ಅಂದರಷ್ಟೇ ಮುಂದುವರೆಯುವುದು. ನಿನ್ನ ಮಾತೇ ಕೊನೆ. ನೀ ನಿನ್ನ ನಿರ್ಧಾರ ನಿಧಾನವಾಗಿ ತಿಳಿಸು' ಅಂತ ಜಫ್ರುಲ್ಲಾ ಮಗಳನ್ನು ಎದುರಿಗೆ ಕೂರಿಸಿಕೊಂಡು ಮೊನ್ನೆ ಹೇಳಿದ ಮಾತುಗಳು ಸಮೀನಾ ಮನಸಲ್ಲಿ ಉತ್ತರವೇ ಗೊತ್ತಿಲ್ಲದ ಪ್ರಶ್ನೆಪತ್ರಿಕೆಯೊಂದನ್ನು ಮುಖದೆದುರು ಹಿಡಿದಂತಾಗಿತ್ತು. ಅಪ್ಪ ಮಾತಾಡುತ್ತಿರುವಾಗೆಲ್ಲ ಅಪ್ಪಿತಪ್ಪಿ ಕೂಡ ಸಮೀನಾ ಅಪ್ಪನ ಮುಖ ನೋಡಲಿಲ್ಲ. ಕೂತಿದ್ದ ಸೋಫಾ ಸೆಟ್ಟಿನ ಬಟ್ಟೆ ಕೆರೆಕೆರೆದು ಭಾರತದ ಭೂಪಟದಂತಹ ಚಿತ್ರ ಮೂಡಿಸಿದ್ದಳು.

ಗುಲ್ನಾರ್ ಗಂಡನ ಮಾತಿಗೆ ದನಿಯಾಗಿ, 'ನೋಡು ಮಗಳೇ ನಾವು ಗಾರೆ ಕೆಲಸ ಮಾಡಿ ಸಣ್ಣ ಮನೆ ಮಾಡಿಕೊಂಡು ನಿನ್ನ ಮತ್ತು ನಿನ್ನ ತಮ್ಮನ ಓದಿಗೆ, ನಾಳಿನ ಭವಿಷ್ಯಕ್ಕೆ ಬದುಕುತ್ತಿದ್ದೇವೆ. ನೀ ಹೇಳಿದಂತೆ ಯಾವ ಯಾವ ಕೋರ್ಸ್‌ಂತಿಯೋ ಅದಕ್ಕೆ, ಯಾವ ಕಾಲೇಜಂತಿಯೋ ಅದಕ್ಕೆ ಸೇರಿಸಿ ಓದಿಸುತ್ತಿದ್ದೇವೆ. ನಿಮ್ಮ ಅಬ್ಬುಗೂ ವಯಸ್ಸಾಗ್ತಾ ಬಂತು. ಕರಣೆ ಆಡಿಸಲಾಗುತ್ತಿಲ್ಲ ಅಂತ ಹೇಳ್ತಿರ್ತಾರೆ. ನಿನ್ನ ಬಿಟ್ಟು ಅವರಿಗಂತೂ ಇರಲಾಗಲ್ಲ. ತ್ಯಾವಣಗೆಯ ಪೊಲೀಸ್ ವರ ಬಂದು ಒಪ್ಪಿಹೋಗಿತ್ತು, ನಾವೆಲ್ಲಾ ಒಪ್ಪಿದ್ರೂ ಬೆಂಗಳೂರಲ್ಲಿ ಡ್ಯೂಟಿ ಅನ್ನೋ ಕಾರಣಕ್ಕೆ ಇವರೇ ಸುಮ್ಮನಾದ್ರು. ದೂರ ಕಳಿಸಲು ಅವರಿಗಂತೂ ಇಷ್ಟ ಇಲ್ಲ. ಈಗ ಅವರ ಅತ್ತೆಯ ಮೊಮ್ಮಗನ ಮೇಲೆ ಮನಸಾಗಿ ಮೊದಲು ನಿನ್ನ ಒಪ್ಪಿಗೆ ಕೇಳುತ್ತಿದ್ದಾರೆ. ನೀ ಓದಿದವಳು, ಇನ್ನೇನು ನಿನ್ನ ಡಿಗ್ರಿ ಈ ವರ್ಷ ಮುಗಿಯುತ್ತೆ. ಮುಂದೆ ಓದಬೇಕಂತ ತೋಳಹುಣಸೆಯ ದೊಡ್ಡ ಕಾಲೇಜಿಗೆ ಸೇರುತ್ತೀನಂತಿದ್ದೀಯ. ನಿನ್ನ ಒಪ್ಪಿಗೆ ಏನಂತ ತಿಳಿಸಿದರೆ ನಾವು ಮುಂದುವರೆಯಲು ಸಾಧ್ಯ ಆಗುತ್ತದೆ' ಅಂತ ಅಂದ ಅಮ್ಮನ ಮಾತಿಗೆ ಸಮೀನಾ ಉತ್ತರಿಸದೇ ಹೌದೋ ಅಲ್ಲವೋ ಎಂಬಂತೆ ಅಮ್ಮನ ಮುಖ ಬೇಸರ ಮಿಶ್ರಿತ ದುಃಖದಿಂದ ನೋಡಿ ಮೌನವಾಗಿ ಎದ್ದು ರೂಮು ಸೇರಿದ್ದಳು.

ಗಂಡ ಹೆಂಡತಿ ಮುಖ ಮುಖ ನೋಡಿಕೊಂಡು ಮೌನವಾಗಿದ್ದರು. ಎರಡು ದಿನ ಮನೆ ಮೌನ ಮೌನ. ಜಫ್ರುಲ್ಲಾನ ಸೋದರತ್ತೆಯ ಮೊಮ್ಮಗ ಸೈಯದ್ ಸೂರಜ್. ಇದೀಗ ದಾವಣಗೆರೆಯ ಎಸ್.ಎಸ್. ಹೈಟೆಕ್ ಕಾಲೇಜಿನಲ್ಲಿ ಬಿಎಸ್ಸಿ ನರ್ಸಿಂಗ್ ಅಂತಿಮ ವರ್ಷದಲ್ಲಿ ಓದುತ್ತಿದ್ದಾನೆ. ಸಂತೋಷಪುರದ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿಯೇ ಇಬ್ಬರೂ ಆಂಗ್ಲ ಮಾಧ್ಯಮದಲ್ಲಿ ಹೈಸ್ಕೂಲು ಮುಗಿಸಿದ್ದು. ಆಜೂಬಾಜು ಬೀದಿಯಲ್ಲಿ ಮನೆಯಿದ್ದರೂ ಮೂರು ವರ್ಷದಲ್ಲಿ ಒಮ್ಮೆಯೂ ಪರಸ್ಪರ ಮಾತು ಬಿಡಿ, ಕಣ್ಣೆತ್ತಿ ನೋಡಿಯೂ ಇರಲಿಲ್ಲ! ಇದೀಗ ಸಮೀನಾ ಬಿಎಸ್ಸಿ ಅಂತಿಮ ವರ್ಷದಲ್ಲಿದ್ದಾಳೆ. ಸಾಧಾರಣ ಮೈಕಟ್ಟಿನ, ಎಣ್ಣೆಗೆಂಪಿನ ಸಮೀನಾಳದ್ದು ಮಿತ ಮಾತು ಮತ್ತು ಸರಳ ಸ್ವಭಾವ. ವಿಜ್ಞಾನದ ಹುಡುಗಿಯಾದರೂ ಹೈಸ್ಕೂಲಿನಲ್ಲಿ ಸಿಕ್ಕ ಒಳ್ಳೆಯ ಕನ್ನಡ ಮೇಷ್ಟ್ರಿಂದಾಗಿ ನಿರರ್ಗಳ ಕನ್ನಡದ ಜೊತೆಯಲ್ಲಿ ಕವಿತೆ ಬರೆಯುವುದನ್ನೂ ರೂಢಿಸಿಕೊಂಡಿದ್ದಳು.

ಜಫ್ರುಲ್ಲಾನ ಬಾಳಿಗೆ, ಪಾಲಿಗೆ ಅವಳು ಅವನಮ್ಮ ಸಾಬಿರಾಬಿನೆ. ಅಪರೂಪಕ್ಕೆ ಅಂದರೆ ಮದುವೆಯಾದ ಒಂಬತ್ತು ವರ್ಷದ ನಂತರ ಅವತರಿಸಿದ ಮನೆಮಗಳು. ಕೂಸಿದ್ದಾಗಿನಿಂದ ಮಗಳನ್ನು ಮಗಳಂತೆ ನೋಡದೇ ಅಮ್ಮನೇ ಮತ್ತೆ ಹುಟ್ಟಿ ಬಂದಿದ್ದಾಳೆಂದುಕೊಂಡು ಜತನು ಮತ್ತು ಪ್ರೀತಿ ಮಾಡುತ್ತಿದ್ದ.

ಬೈಕ್ ಓಡುತ್ತಲೇ ಇತ್ತು. ಸೂರಜ್ ಬಲಗೈನಿಂದ ನಿಧಾನವಾಗಿ ಆಕ್ಸಿಲೇಟರ್ ಹಿಂಡುತ್ತಾ ಮೀಡಿಯಂ ವೇಗದಲ್ಲಿ ಬಾಡ ದಾಟಿ ಮರಡಿ ಸೇತುವೆ ಹತ್ತಲು ಹಳೆಯ ಬೈಕು ಕಿರ್... ಅನ್ನುತ್ತಿತ್ತು. ಬೈಕಿನ ಹಿಂದೆ ಮೊಮ್ಮಗನ ಭುಜ ಹಿಡಿದು ಕೂತ ಶರಫುನಜ್ಜಿ ಮೆಲ್ಲ ಮಾತಿಗಿಳಿದಳು.

'ಏನಪ್ಪ ಸಮೀನಾ ನಿನ್ನ ಜೊತೆಗೆ ಅಲ್ವಾ ಓದಿದ್ದು?'

'ಯಾವ ಸಮೀನಾ ಅಜ್ಜಿ?'

'ನಿಮ್ಮ ಪಕ್ಕದ ಬೀದಿ ಲಂಬು ಜಫ್ರುಲ್ಲಾ, ನಿಮ್ಮಾವ, ಅವನ ಮಗಳು...' ರಸ್ತೆಯ ಎಡ ಬಲದ ಗದ್ದೆಗಳಿಂದ ತಣ್ಣಗೆ ಬೀಸಿ ಬರುವ ಗಾಳಿ ಇಬ್ಬರ ಮುಖಕ್ಕೂ ರಾಚುತ್ತಿತ್ತು.

'ಹೂನಜ್ಜಿ. ಹೈಸ್ಕೂಲ್ ಮೂರೂ ವರ್ಷ ಜೊತೆಗೆ ಓದಿದ್ದು ಯಾಕಜ್ಜಿ?'

'ನಿಂಗ್ ಅವನ ಮಗಳ್ನ ಕೊಡಬೇಕಂತ ಅವರಿವರ ಹತ್ರ ಹೇಳಿದ್ನಂತಪ್ಪ... ನಿಮ್ಮಮ್ಮನ ಕಿವಿಗೆ ಈ ಸುದ್ದಿ ಬಿದ್ದಿದೆ ಏನಂತೀಯಾ?'

'ಅಜ್ಜಿ ನಂಗ್ಯಾಕ್ ಈ ಸುದ್ದಿ ಹೇಳ್ತಿದ್ದಿಯ, ಅದೂ ಅಲ್ದೆ ಅವಳು ಮೂರು ವರ್ಷ ಜೊತೆಲಿ ಓದಿದ್ರೂ ಆ ದೃಷ್ಟಿಯಲ್ಲಿ ನಾವಿಬ್ರೂ ಇಲ್ಲ ಮತ್ತು ಆಲೋಚನೆಯೂ ಇಲ್ಲ. ಆ ಸುದ್ದಿ ಬಿಟ್ಟು ಬೇರೆ ಮಾತಾಡಜ್ಜಿ' ಅಂದ.

ಅಜ್ಜಿ ಮೌನವಾದರು; ದಾರಿಯೂ ಮತ್ತು ಮಾತುಗಳೂ ಮುಗಿದಿದ್ದವು. ಇಡೀ ನಾಡಿನ ತುಂಬೆಲ್ಲಾ ಹಿಜಾಬ್ ಗದ್ದಲ ತುಂಬಿ ತುಳುಕುತ್ತಿತ್ತು. ಮುಸಲ್ಮಾನ ಹುಡುಗಿಯರು ಶಾಲಾ ಕಾಲೇಜಿಗೆ ಹೋಗುವುದೋ ಬಿಡುವುದೋ ಅನ್ನುವ ಜಿಜ್ಞಾಸೆಯಲ್ಲಿ ಒದ್ದಾಡುತ್ತಿದ್ದರು. ಸಂತೋಷಪುರದ ಡಿಗ್ರಿ ಕಾಲೇಜಿನಲ್ಲೇ ಒಮ್ಮೆ ಬೆಳಗಿನ ಜಾವ ಯಾರೋ ಕಿಡಿಗೇಡಿಗಳು ಓಮಿನಿಯಲ್ಲಿ ಬಣ್ಣದ ಶಾಲುಗಳನ್ನು ಹೇರಿಕೊಂಡು